## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 629 |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ದೇವನಹಳ್ಳಿ ತಾಲ್ಲೂಕಿನಲ್ಲಿ ಗಣಿ ಧೂಳಿನಿಂದ ರೇಷ್ಮೆ ಕೃಷಿಗೆ ಹಾನಿಯಾಗುತ್ತಿರುವ ಬಗ್ಗೆ. |
| 4 | ಉತ್ತರಿಸುವ ದಿನಾಂಕ | 23-12-2022 |
| 5 | ಉತ್ತರಿಸುವವರು | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

<table>
<tr><th></th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 40 ಕ್ವಾರಿಗಳು, 160 ಗ್ರಾನೈಟ್ ಫ್ಯಾಕ್ಟರಿ / ಕಟ್ಟಿಂಗ್ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿ ಕಲ್ಲುಗಳನ್ನು ಬ್ಲಾಸ್ಟ್ ಮಾಡುವುದು ಮತ್ತು ಗ್ರಾನೈಟ್ ಕಟ್ಟಿಂಗ್ ನಂತಹ ಗಣಿಗಾರಿಕೆ ಕೆಲಸಗಳು ನಡೆಯುತ್ತಿದ್ದು, ಇವುಗಳ ನಿಯಮಗಳನ್ನು ಪಾಲಿಸದಿರುವ ಪರಿಣಾಮ ಹಲವಾರು ಗ್ರಾಮಗಳಲ್ಲಿ ಗಣಿ ಧೂಳು ಹೆಚ್ಚಾಗಿ ರೇಷ್ಮೆ ಬೆಳೆಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿತಾಲ್ಲೂಕಿನ ಚಿಕ್ಕಗೊಲ್ಲಹಳ್ಳಿ, ಕೆ.ಹೊಸೂರು, ಮಾಯಸಂದ್ರ, ಮುದ್ದನಾಯಕನಹಳ್ಳಿ, ಕೊಯಿರಾ, ಬಿದಲೂರು ಪ್ರದೇಶಗಳಲ್ಲಿ ಗಣಿಗಾರಿಕೆ ಕೆಲಸಗಳು ನಡೆಯುತ್ತಿದ್ದು ಹಿಪ್ಪುನೇರಳೆ ತೋಟಕ್ಕೆ ಧೂಳು ಆವರಿಸಿ ರೇಷ್ಮೆ ಬೆಳೆಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಆ</td><td>ಬಂದಿದ್ದಲ್ಲಿ, ಈ ಹಾನಿಯ ಕುರಿತು ರೇಷ್ಮೆ ಇಲಾಖೆಯಿಂದ ಕ್ಷೇತ್ರ ಅಧ್ಯಯನ ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ಈ ಭಾಗದಲ್ಲಿ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ನಷ್ಟಗಳೆಷ್ಟು; (ವಿವರವಾದ ಮಾಹಿತಿ ನೀಡುವುದು)</td><td>ಈ ಹಾನಿಯ ಕುರಿತು ರೇಷ್ಮೆ ಇಲಾಖೆಯಿಂದ ಕ್ಷೇತ್ರ ಅಧ್ಯಯನ ನಡೆಸಲಾಗಿದೆ. ಈ ಭಾಗದಲ್ಲಿ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ನಷ್ಟದ ವಿವರಗಳು ಸಂಕ್ಷಿಪ್ತವಾಗಿ ಕೆಳಕಂಡಂತಿದೆ.
<table>
<tr><th>ಹಳ್ಳಿಗಳ ಸಂಖ್ಯೆ</th><th>ರೇಷ್ಮೆ ಬೆಳೆಗಾರರ ಸಂಖ್ಯೆ</th><th>ಹಿಪ್ಪುನೇರಳೆ ವಿಸ್ತೀರ್ಣ (ಎಕರೆ)</th><th>ಅಂದಾಜು ನಷ್ಟದ ಮೊತ್ತ (ರೂಗಳಲ್ಲಿ)</th></tr>
<tr><td>6</td><td>37</td><td>40.35</td><td>74,52,850.00</td></tr>
</table>
ರೇಷ್ಮೆ ಬೆಳೆಗಾರರವಾರು, ಗ್ರಾಮವಾರು, ಸರ್ವೆ ನಂಬರ್ ವಾರು, ವಿಸ್ತೀರ್ಣದೊಂದಿಗೆ ಹಾಗೂ ಅವರು ಧೂಳಿನಿಂದ ನಷ್ಟ ಹೊಂದಿದ ಬೆಳೆಗಳ ಸಂಖ್ಯೆ ಹಾಗೂ ಅಂದಾಜು ಮೊತ್ತದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಇ</td><td>ಈ ಭಾಗದಲ್ಲಿ ದೂಳಿನಿಂದ ನಷ್ಟಕ್ಕೆ ಒಳಗಾಗಿರುವ ರೈತರಿಗೆ ನ್ಯಾಯ ಒದಗಿಸಲು ಮತ್ತು ಈ ಪ್ರದೇಶದಲ್ಲಿ ನಡೆಯುತ್ತಿರುವ ಅತಿಯಾದ ಗಣಿಗಾರಿಕೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ದಿನಾಂಕ:-03-09-2021 ರಂದು ಕೊಯಿರಾ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕೆ.ಹೊಸೂರು ಗ್ರಾಮದಲ್ಲಿ ನಡೆದ ದ್ವಿತಳಿ ಪ್ರೇರೇಪಣಾ ತರಬೇತಿಯಲ್ಲಿ ರೇಷ್ಮೆ ಬೆಳೆಗಾರರು ಭಾಗವಹಿಸಿದ್ದು, ಭಾಗವಹಿಸಿರುವ ರೇಷ್ಮೆ ಬೆಳೆಗಾರರಿಗೆ ಕ್ರಷರ್ ಧೂಳನ್ನು ತಡೆಯುವ ಸಂಬಂಧ ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆ. ದಿನಾಂಕ.11.3.2022ರಂದು ವಿಜ್ಞಾನಿಗಳು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಇವರು ದೇವನಹಳ್ಳಿ ತಾಲ್ಲೂಕಿನ ಕೊಯಿರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಿಪ್ಪುನೇರಳೆ ತೋಟಗಳನ್ನು ಪರಿಶೀಲಿಸಿ ಕೆಲವು</td></tr>
</table>

| | | |
|---|---|---|
| | | ಶಿಫಾರಸ್ಸುಗಳನ್ನು ನಷ್ಟಕ್ಕೆ ಒಳಗಾಗಿರುವ ರೇಷ್ಮೆ ಬೆಳೆಗಾರರಿಗೆ ನೀಡಿದ್ದು, ಅದರಂತೆ<br>1) ಸೊಪ್ಪು ಬಳಸುವ ಒಂದು ದಿನದ ಮೊದಲು ಸೊಪ್ಪನ್ನು ಜೆಟ್ ಸ್ಪ್ರೇಯರ್ ಮುಖಾಂತರ ನೀರು ಹಾಯಿಸಿ ನಂತರ ಸೊಪ್ಪು ಕಟಾವು ಮಾಡಿ ಹುಳುಗಳಿಗೆ ಕೊಡುವಂತೆ ತಿಳಿಸಿದ್ದು, ಅದರಂತೆ ಇಲಾಖೆಯಿಂದ ಕೋಯಿರಾ ಮತ್ತು ಸುತ್ತಮುತ್ತಲಿನ ಗ್ರಾಮದ ರೇಷ್ಮೆ ಬೆಳೆಗಾರರಿಗೆ ಸಹಾಯಧನ ರೂಪದಲ್ಲಿ ಪವರ್ ಸ್ಪ್ರೇಯರ್ ಗಳನ್ನು ನೀಡಲಾಗಿದೆ.<br>2) ಈ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ಕ್ರಷರ್ ನಿಂದ ಧೂಳು ಬರದಂತೆ ಹಿಪ್ಪು ನೇರಳೆ ತೋಟದ ಸುತ್ತ ತಾತ್ಕಾಲಿಕವಾಗಿ ತಡೆಗೋಡೆಯಾಗಿ ಧೂಳು ನಿಯಂತ್ರಿಸಲು ಇಲಾಖೆಯಿಂದ ಶೇಡ್ ನೆಟ್ ಗಳನ್ನು ಉಚಿತವಾಗಿ ವಿತರಿಸಲಾಗಿದೆ.<br>3) ಹಿಪ್ಪುನೇರಳೆ ತೋಟದ ಕೊನೆಯ ಎರಡು ಸುತ್ತಿನ ಹಿಪ್ಪುನೇರಳೆ ಗಿಡಗಳನ್ನು ಎತ್ತರವಾಗಿ ಬೆಳೆಸಲು ತಿಳುವಳಿಗೆ ನೀಡಿದೆ.<br>ಈ ಪ್ರದೇಶದಲ್ಲಿ ನಡೆಯುತ್ತಿರುವ ಅತಿಯಾದ ಗಣಿಗಾರಿಕೆಯನ್ನು ನಿಯಂತ್ರಿಸಲು ಗಣಿ ಇಲಾಖೆಯಿಂದ ಕೈಗೊಂಡಿರುವ ಕ್ರಮದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: ರೇಷ್ಮೆ 212 ರೇಕೃವಿ 2022**

(ಡಾ.ನಾರಾಯಣಗೌಡ)
**ರೇಷ್ಮೆ, ಯುವಸಬಲೀಕರಣ ಮತ್ತು**
**ಕ್ರೀಡಾ ಸಚಿವರು**

★ 629

ಅನುಬಂಧ - 1

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಗಣಿ, ಕ್ರಷರ್ ಧೂಳಿನಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಹಿಪ್ಪುನೇರಳೆ ತೋಟಕ್ಕೆ ಧೂಳು ಆವರಿಸಿ ಹಾನಿಯಾಗುತ್ತಿರುವ ಬಗ್ಗೆ

| ಕ್ರ ಸಂ | ರೇಷ್ಮೆ ಬೆಳೆಗಾರರ ಹೆಸರು (ಶ್ರೀ / ಶ್ರೀಮತಿ) | ತಂದೆ/ ಗಂಡನ ಹೆಸರು (ಶ್ರೀಯುತ) | ಗ್ರಾಮ | ದಾಖಲೆ ಗ್ರಾಮ & ಸರ್ವೇ ನಂ | ಹಿಪ್ಪುನೇರಳೆ ವಿಸ್ತೀರ್ಣ (ಎಕರೆಗಳಲ್ಲಿ) | ರೇಷ್ಮೆ ಹುಳು ಸಾಕಾಣೆ ಮಾಡುವ ಮೊಟ್ಟೆಗಳು (ಪ್ರತಿ ಬೆಳೆಗೆ) | ಪಡೆಯುತ್ತಿರುವ ಅಂದಾಜು ಇಳುವರಿ (ಕೆ.ಜಿ.ಗಳಲ್ಲಿ) | ಧೂಳಿನಿಂದ ಹಾನಿಯಾದ ಬೆಳೆಗಳ ಸಂಖ್ಯೆ | ಹಾನಿಯಾಗಿರುವ ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|---|---|
| 1 | ಎಚ್ ಸುಬ್ರಮಣಿ | ಹನುಮಂತರಾಯಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 39/5 | 1.11 | 255 | 70 | 2 | 232050 |
| 2 | ದೊಡ್ಡಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 29/3 | 1.27 | 335 | 70 | 2 | 304850 |
| 3 | ಚಿಕ್ಕಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಮುದ್ದನಾಯಕನಹಳ್ಳಿ 97/1 | 2.10 | 450 | 70 | 2 | 409500 |
| 4 | ಕೆ ನಾಗರಾಜ | ಕೆಂಪಣ್ಣ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 40/5 | 0.28 | 140 | 70 | 2 | 127400 |
| 5 | ಕೆ ರಮೇಶ | ಕೆಂಪಣ್ಣ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 74/2, 74/3, 74/5, | 1.14 | 270 | 70 | 2 | 245700 |
| 6 | ಲಕ್ಷ್ಮಮ್ಮ | ಮುನಿಆಂಜಿನಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 23/2 23/14 | 0.28 | 140 | 70 | 2 | 127400 |
| 7 | ಮುನಿಆಂಜಿನಪ್ಪ | ಚಿಕ್ಕಮುನಿಬಯ್ಯ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 23/6 23/1 | 0.25 | 125 | 70 | 2 | 113750 |
| 8 | ನರಸಿಂಹಯ್ಯ (ದಾಖಲೆ ಮಾರಪ್ಪ) | ಮಾರಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 20/2 | 1.00 | 200 | 70 | 2 | 182000 |
| 9 | ಕೆಂಪಣ್ಣ | ತಮ್ಮಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 62/1 | 0.26 | 130 | 70 | 2 | 118300 |
| 10 | ನಂಜಪ್ಪ | ಹನುಮಂತರಾಯಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 43 ಚಿಕ್ಕಗೊಲ್ಲಹಳ್ಳಿ 103, 51 | 3.06 | 630 | 70 | 2 | 573300 |
| 11 | ಜಯರಾಮಯ್ಯ | ಮುನಿಸೊಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 26 | 0.20 | ಸೊಪ್ಪು ಮಾರಾಟ | | 2 | 64000 |
| 12 | ಮರೇಗೌಡ | ತಮ್ಮಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 42 ಚಿಕ್ಕಗೊಲ್ಲಹಳ್ಳಿ 39/8 | 0.34 | ಸೊಪ್ಪು ಮಾರಾಟ | | 2 | 120000 |
| 13 | ಶೈಲಜ | ರಮೇಶ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 38 | 1.00 | 200 | 70 | 2 | 182000 |
| 14 | ಮುನಿಆಂಜಿನಪ್ಪ | ನಂಜಪ್ಪ | ಚಿಕ್ಕಗೊಲ್ಲಹಳ್ಳಿ | ಮುದ್ದನಾಯಕನಹಳ್ಳಿ 85/1 | 2.00 | ಸೊಪ್ಪು ಮಾರಾಟ | | 2 | 240000 |
| 15 | ಮುನಿನಂಜಪ್ಪ | ಮುನಿಯಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 51 | 1.00 | 200 | 70 | 2 | 182000 |
| 16 | ಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 54/1 | 0.20 | ಸೊಪ್ಪು ಮಾರಾಟ | | 2 | 64000 |
| 17 | ರಮೇಶ (ದಾಖಲೆ ಮುನಿಸೊಣ್ಣಪ್ಪ) | ಮುನಿಸೊಣ್ಣಪ್ಪ | ಕೆ ಹೊಸೂರು | ಮಾಯಸಂದ್ರ 40 | 1.00 | 200 | 70 | 2 | 182000 |
| 18 | ಮರಿಯಮ್ಮ | ದೊಡ್ಡಬಚ್ಚಪ್ಪ | ಮಾಯಸಂದ್ರ | ಮಾಯಸಂದ್ರ 25/1 | 1.00 | 200 | 70 | 2 | 182000 |
| 19 | ನರಸಿಂಹಯ್ಯ | ಚಿಕ್ಕಕದಿರಪ್ಪ | ಮಾಯಸಂದ್ರ | ಮೀಸಗಾನಹಳ್ಳಿ 72/14 | 1.00 | 200 | 70 | 2 | 182000 |
| 20 | ಚಿಕ್ಕಕದಿರಪ್ಪ | ದಾಸಪ್ಪ | ಮಾಯಸಂದ್ರ | ಮೀಸಗಾನಹಳ್ಳಿ 72/12 | 0.22 | 110 | 70 | 2 | 100100 |
| 21 | ಮೂರ್ತಿ | ಕೆಂಪಣ್ಣ | ಮಾಯಸಂದ್ರ | ಮಯಸಂದ್ರ 54/2 | 0.25 | 125 | 70 | 2 | 113750 |
| 22 | ನರಸಿಂಹಪ್ಪ | ಮುನಿಶಾಮಪ್ಪ | ಮಾಯಸಂದ್ರ | ಮಯಸಂದ್ರ 45 | 1.00 | 200 | 70 | 2 | 182000 |
| 23 | ಕೆಂಪಣ್ಣ | ಮೋಟಪ್ಪ | ಮಾಯಸಂದ್ರ | ಮಯಸಂದ್ರ 54/1 | 0.20 | ಸೊಪ್ಪು ಮಾರಾಟ | | 2 | 64000 |
| 24 | ಬಚ್ಚಮ್ಮ (ದಾಖಲೆ ಮುನಿಬಚ್ಚಪ್ಪ) | ಮುನಿಬಚ್ಚಪ್ಪ | ಮಾಯಸಂದ್ರ | ಮಾಯಸಂದ್ರ 1/4 | 0.20 | 100 | 70 | 2 | 91000 |
| 25 | ಆಜಮ್ಮ | ಚಿಕ್ಕಮುನಿಯಪ್ಪ | ಕೊಯಿರಾ | ಮೀಸಗಾನಹಳ್ಳಿ 108 | 3.34 | 770 | 70 | 2 | 1078000 |
| 26 | ಮುನಿಮಾರಪ್ಪ | ಒಬಳಪ್ಪ | ಬಿದಲೂರು | ಮುದ್ದನಾಯಕನಹಳ್ಳಿ 167/ಬಿ23 | 1.00 | 200 | 70 | 2 | 182000 |
| 27 | ಚಂದ್ರಶೇಖರ್ | ಗಂಗಪ್ಪ | ಮುದ್ದನಾಯಕನಹಳ್ಳಿ | ಬಿದಲೂರು 235 | 1.00 | 200 | 70 | 2 | 182000 |
| 28 | ನಂಜುಂಡಪ್ಪ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 200 | 70 | 2 | 182000 |
| 29 | ಚನ್ನಪ್ಪ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 200 | 70 | 2 | 182000 |
| 30 | ಮುನೇಗೌಡ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 200 | 70 | 2 | 182000 |
| 31 | ಕೆ ಆಂಜಿನಪ್ಪ | ಕೃಷ್ಣಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 112/ಪಿ25 | 1.00 | 200 | 70 | 2 | 182000 |



Generated from eOffice by VANITHA H, SERI-US(VH), UNDER SECRETARY, SERICULTURE SEC on 21/12/2022 11:40 AM

| | | | | | | | | |
|---|---|---|---|---|---|---|---|---|
| 32 | ಮುನಿರಾಜು | ವೆಂಕಟಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 112/ಪಿ24 | 0.30 | 150 | 70 | 2 | 136500 |
| 33 | ವಿನುತ್‌ಕುಮಾರ್ | ಬೈರಪ್ಪ | ಮುದ್ದನಾಯಕನಹಳ್ಳಿ | ಬಿದಲೂರು 189/3 | 1.00 | ಸೊಪ್ಪು ಮಾರಾಟ | | 2 | 120000 |
| 34 | ರಮೇಶ | ಗಂಗಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 6/3 | 1.00 | ಸೊಪ್ಪು ಮಾರಾಟ | | 2 | 120000 |
| 35 | ಕೃಷ್ಣಪ್ಪ | ಕೆಂಪಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 34/5 | 1.30 | 350 | 70 | 2 | 318500 |
| 36 | ನಾಗರಾಜು | ಸುಬ್ಬಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 23/8, 23/3 | 0.20 | 100 | 70 | 2 | 91000 |
| 37 | ನಾರಾಯಣಸ್ವಾಮಿ | ಸುಬ್ಬಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 23/1, 23/3, 31/2 | 0.25 | 125 | 70 | 2 | 113750 |
| | | | | | 40.35 | 6906 | | | 74,52,850 |
| | | | | | | | | | |



Generated from eOffice by VANITHA H. SERI-US(VH), UNDER SECRETARY, SERICULTURE SEC on 21/12/2022 11:40 AM

ಉಪಾಬಂಧ - 2

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ.ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:75[629]ಕ್ಕೆ ಉತ್ತರ.**

**ವಿಷಯ:- ದೇವನಹಳ್ಳಿ ತಾಲ್ಲೂಕಿನಲ್ಲಿ ಗಣಿ ಧೂಳಿನಿಂದ ರೇಷ್ಮೆ ಕೃಷಿಗೆ ಹಾನಿಯಾಗುತ್ತಿರುವ ಬಗ್ಗೆ.**

**ಉತ್ತರಿಸಬೇಕಾದ ದಿನಾಂಕ: 23-12-2022**

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಈ ಭಾಗದಲ್ಲಿ ಗಣಿ ಧೂಳಿನಿಂದ ನಷ್ಟಕ್ಕೆ ಒಳಗಾಗಿರುವ ರೈತರಿಗೆ ನ್ಯಾಯ ಒದಗಿಸಲು ಮತ್ತು ಈ ಪ್ರದೇಶದಲ್ಲಿ ನಡೆಯುತ್ತಿರುವ ಅತಿಯಾದ ಗಣಿಗಾರಿಕೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಮತ್ತು ಸ್ಟೋನ್ ಕ್ರಷರ್ ಘಟಕಗಳ ವಿವರ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ಕಲ್ಲುಗಣಿ / ಕ್ರಷರ್ ಗಳ ವಿವರ</th><th>ಒಟ್ಟು ಕಲ್ಲುಗಣಿ / ಕ್ರಷರ್ ಗಳ ಸಂಖ್ಯೆ</th><th>ಒಟ್ಟು ವಿಸ್ತೀರ್ಣ (ಎ/ಗು)</th></tr>
<tr><td>1</td><td>ಅಲಂಕಾರಿಕ ಶಿಲೆ</td><td>52</td><td>74-01</td></tr>
<tr><td>2</td><td>ಕಟ್ಟಡ ಕಲ್ಲು</td><td>22</td><td>66-04</td></tr>
<tr><td>3</td><td>ಸ್ಟೋನ್ ಕ್ರಷರ್ ಘಟಕ</td><td>16</td><td>40-38</td></tr>
</table>
ಕಳೆದ ಮೂರು ವರ್ಷಗಳಿಂದ ಮೇಲೆ ತಿಳಿಸಿರುವ ಕಲ್ಲುಗಣಿ ಗುತ್ತಿಗೆ ಮತ್ತು ಸ್ಟೋನ್ ಕ್ರಷರ್ ಘಟಕಗಳಿಂದ ಸರ್ಕಾರಕ್ಕೆ ಸಂದಾಯವಾದ ಆದಾಯದ ವಿವರ:<br>
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ರಾಜಧನ</th><th>ಡಿ.ಎಂ.ಎಫ್</th></tr>
<tr><td>1</td><td>2020-21</td><td>1242.0</td><td>37.19</td></tr>
<tr><td>2</td><td>2021-22</td><td>1406.0</td><td>34.78</td></tr>
<tr><td>3</td><td>2022-23 (ನವೆಂಬರ್ ಅಂತ್ಯಕ್ಕೆ)</td><td>1263.0</td><td>23.98</td></tr>
</table>
• ದೇವನಹಳ್ಳಿ ತಾಲ್ಲೂಕು ಕೊಯಿರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದೊರೆಯುವ ಶಿಲೆಯು ಅನನ್ಯ (Unique) ಶಿಲೆಯಾಗಿದ್ದು, ಸದರಿ ಶಿಲೆಯು ವಿಧಾನಸೌಧ, ಸುವರ್ಣಸೌಧ ನಿರ್ಮಾಣದಲ್ಲಿ ಬಳಸಿರುವ ಶಿಲೆಯಾಗಿರುತ್ತದೆ. ಈ ಶಿಲೆಯನ್ನು ದೇವಸ್ಥಾನಗಳನ್ನು ನಿರ್ಮಿಸಲು ಬಳಕೆಯಾಗುವ ಏಕೈಕ ಶಿಲೆಯಾಗಿರುತ್ತದೆ.<br>
• ಈ ಭಾಗದಲ್ಲಿನ ಕಟ್ಟಡ ಕಲ್ಲುಗಣಿ ಗುತ್ತಿಗೆಗಳಿಂದ ತೆಗೆಯುವ ಉಪಖನಿಜವು ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಮತ್ತು ಗೃಹ ನಿರ್ಮಾಣ ಕಾಮಗಾರಿಗಳಿಗೆ ಬಳಕೆಯಾಗುತ್ತಿದ್ದು, ಮೇಲೆ ತಿಳಿಸಿರುವಂತೆ ಸರ್ಕಾರಕ್ಕೆ ರಾಜಸ್ವ ಸಂದಾಯವಾಗುತ್ತಿರುತ್ತದೆ.</td></tr>
</table>



Generated from eOffice by VANITHA H, SERI-US(VH), UNDER SECRETARY, SERICULTURE SEC on 21/12/2022 11:42 AM

- ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.
- ಕಲ್ಲುಗಣಿಗಾರಿಕೆಗೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರದಿಂದ ಜಾರಿ ಮಾಡುವ ಪರಿಸರ ಅನುಮತಿ ಪತ್ರದಲ್ಲಿ ವಾರ್ಷಿಕವಾಗಿ ತೆಗೆಯುವ ಉಪಖನಿಜದ ಪ್ರಮಾಣದ ಮಿತಿಯನ್ನು ನಿಗಧಿಪಡಿಸಲಾಗುತ್ತದೆ.
- ಕಳೆದ ಮೂರು ವರ್ಷಗಳ ಅಂಕಿ-ಅಂಶಗಳ ಪ್ರಕಾರ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಗುತ್ತಿಗೆದಾರರು ಪರಿಸರ ಅನುಮತಿ ಪತ್ರದಲ್ಲಿ ಒಪ್ಪಿಗೆ ನೀಡಿರುವ ಉಪಖನಿಜ ಪ್ರಮಾಣದ ಮಿತಿಯೊಳಗೆ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವುದು ಕಂಡುಬಂದಿದೆ.
- ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ತೈಲಗೆರೆ ಮತ್ತು ಮುದ್ದನಾಯಕನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಕಲ್ಲುಗಣಿ ಮತ್ತು ಸ್ಟೋನ್ ಕ್ರಷರ್ ಘಟಕದ ಪ್ರದೇಶಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲಿಸಿ ದಿ:02-03-2022 ರಂದು ಪರಿಶೀಲಿಸಿದ್ದು, ಕಲ್ಲುಗಣಿ ಮತ್ತು ಸ್ಟೋನ್ ಕ್ರಷರ್ ಘಟಕಗಳಿಂದ ಉತ್ಪತ್ತಿಯಾಗುವ ಧೂಳಿನ ಪ್ರಮಾಣವು ಮಂಡಳಿಯು ಕಲ್ಲು ಕ್ರಷರ್ ಘಟಕಗಳಿಗೆ ನೀಡಿರುವ ಸಮ್ಮತಿ ಪತ್ರದಲ್ಲಿ ನಿಗಧಿಪಡಿಸಿರುವ ಪ್ರಮಾಣದ ಪರಿಮಿತಿಯಲ್ಲಿರುತ್ತವೆ.
- ಸ್ಟೋನ್ ಕ್ರಷರ್ ಘಟಕಗಳು ಕರ್ನಾಟಕ ಜಲ್ಲಿ ಕ್ರಷರ್ ಗಳ ನಿಯಂತ್ರಣ ಅಧಿನಿಯಮ-2011 ಹಾಗೂ ತಿದ್ದುಪಡಿ ಅಧಿನಿಯಮ-2013ರ ಸೆಕ್ಷನ್-6ರಲ್ಲಿ ನಿಗಧಿಪಡಿಸಿರುವ ಮಾನಕಗಳಿಗೆ ಅನುಗುಣವಾಗಿ ಕಾರ್ಯಾಚರಣೆ ನಡೆಸುತ್ತಿರುತ್ತವೆ ಎಂದು ವರದಿಸಿರುತ್ತಾರೆ.
- ನಿರ್ದೇಶಕರು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನ ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಬೆಂಗಳೂರು ಕಛೇರಿಯ ವಿಜ್ಞಾನಿಗಳು ದಿ: 11-03-2022 ರಂದು ದೇವನಹಳ್ಳಿ ತಾಲ್ಲೂಕಿನ ವಿವಿಧ ಹಳ್ಳಿಗಳ ರೇಷ್ಮೆ ಕೃಷಿಕರಲ್ಲಿಗೆ ಕ್ಷೇತ್ರ ಪರಿವೀಕ್ಷಣೆ ಮಾಡಿ ದಿ:19-03-2022 ರಂದು ಅಧ್ಯಯನ ವರದಿಯನ್ನು ಸಲ್ಲಿಸಿರುತ್ತಾರೆ.
- ಸದರಿ ವರದಿಯ ಶಿಫಾರಸ್ಸುಗಳಲ್ಲಿ ಸ್ಟೋನ್ ಕ್ರಷರ್ ಘಟಕಗಳಲ್ಲಿ ಹೊರಹೊಮ್ಮುವ ಧೂಳಿನ ನಿಯಂತ್ರಣಕ್ಕೆ ಘಟಕದ ಸುತ್ತಲೂ ತಡೆಗೋಡೆ ನಿರ್ಮಿಸುವುದು ಹಾಗೂ ಧೂಳಿನ ಕಣಗಳು ಮೇಲೇಳದಂತೆ ನೀರನ್ನು ಸಿಂಪಡಿಸಬೇಕು ಎಂದು ತಿಳಿಸಿರುತ್ತಾರೆ.
- ಅದರಂತೆ, ಕಲ್ಲುಗಣಿ ಗುತ್ತಿಗೆ/ಸ್ಟೋನ್ ಕ್ರಷರ್ ಘಟಕಗಳ ಮಾಲೀಕರು ಸದರಿ ಪ್ರದೇಶಗಳಿಂದ ಧೂಳು ಹೊರ ಹೋಗದಂತೆ ಹಾಗೂ ಜನ-



Generated from eOffice by VANITHA H, SERI-US(VH), UNDER SECRETARY, SERICULTURE SEC on 21/12/2022 11:42 AM

| | | |
|---|---|---|
| | | ಜಾನುವಾರುಗಳಿಗೆ ತೊಂದರೆಯಾಗದಂತೆ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಸುತ್ತಲೂ ಪೂರ್ಣ ಪ್ರಮಾಣದಲ್ಲಿ ಜಿಂಕ್ ಶೀಟ್‌ಗಳಿಂದ ತಡೆಗೋಡೆಗಳನ್ನು ನಿರ್ಮಿಸಿ, ಸುತ್ತಲೂ ಗಿಡಗಳನ್ನು ಬೆಳೆಸಿ ಕ್ರಮಕೈಗೊಂಡಿರುತ್ತಾರೆ.<br>• ಜಲ್ಲಿ, ಎಂ-ಸ್ಯಾಂಡ್ ಸಾಗಾಣಿಕೆ ಮಾಡುವ ವಾಹನಗಳಿಗೆ ಟಾರ್ಪಲ್ ಹೊದಿಕೆ ಮಾಡಿ, ರಸ್ತೆಗಳಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸಿಂಪಡಿಸಿ, ಧೂಳನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತಾರೆ. |

ನಿರ್ದೇಶಕರು



Generated from eOffice by VANITHA H, SERI-US(VH), UNDER SECRETARY, SERICULTURE SEC on 21/12/2022 11:42 AM